ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 150 (91)

ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜು (ಸಂದೇಶ್ ನಾಗರಾಜು)
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 13.09.2021

ಉತ್ತರಿಸುವವರು : ಅರಣ್ಯ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಅತ್ಯಂತ ಆಯಕಟ್ಟಿನ ಸ್ಥಳವಾದ ಕೆಕ್ಕನಹಳ್ಳ ಅರಣ್ಯ ಇಲಾಖೆ ಚೆಕ್‌ಪೋಸ್ಟ್ ನಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳು ಕೆಟ್ಟು ಹೋಗಿರುವುದು ಚಾಲ್ತಿಯಲ್ಲಿರುವ ಸಿ.ಸಿ.ಟಿ.ವಿ ಕ್ಯಾಮರಾಗಳು ನೆಲದ ಕಡೆಗೆ ಬಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಪ್ರಕಟವಾಗಿರುವ ವರದಿಯನ್ನು ಸರ್ಕಾರ ಗಮನಿಸಿದೆಯೇ;	ಹೌದು, ಸಿ.ಸಿ.ಟಿ.ವಿ. ಕ್ಯಾಮರಾಗಳು ಗಾಳಿಯಿಂದ ಹಾಗೂ ಕೋತಿಗಳಿಂದ ನೆಲದ ಕಡೆಗೆ ಬಾಗಿದ್ದು, ಸದರಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಸರಿಪಡಿಸಲಾಗಿದೆ.
(ಆ)	ಇದರಿಂದ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆದಾರರಿಗೆ ಅನುಕೂಲವಾಗಿರುವುದು ವಾಹನಗಳ ಗುರುತಿಸುವಿಕೆ ಮತ್ತು ತಪಾಸಣೆಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ತನಿಖಾ ಠಾಣೆಯಲ್ಲಿ ಉಪವಲಯ ಅರಣ್ಯಾಧಿಕಾರಿ ಹಾಗೂ ಇತರೆ ಸಿಬ್ಬಂದಿಗಳು (24/7) ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದಲ್ಲದೆ, ಊಟಿ ಮೈಸೂರು ರಸ್ತೆಯಲ್ಲಿ ಬಂಡೀಪುರದ ಪೋಲೀಸ್ ಉಪ ಠಾಣೆ (Out Post) ನಲ್ಲಿಯು ಸಹ ಪೋಲೀಸ್ ಇಲಾಖೆ ವತಿಯಿಂದ ಸಿ.ಸಿ.ಟಿ.ವಿಗಳನ್ನು ಅಳವಡಿಸಲಾಗಿರುತ್ತದೆ ಮತ್ತು ಮೇಲುಕಾಮನಹಳ್ಳಿ ಅರಣ್ಯ ಪ್ರವೇಶ ದ್ವಾರದಲ್ಲಿಯು ಸಹ ಸಿ.ಸಿ.ಟಿ.ವಿ. ಗಳನ್ನು ಇಲಾಖಾ ವತಿಯಿಂದ ಅಳವಡಿಸಲಾಗಿರುತ್ತದೆ. ಆದುದರಿಂದ, ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆ ನಿಯಂತ್ರಿಸಲು ಕೆಕ್ಕನಹಳ್ಳ ಹೊರತಾಗಿಯೂ ಸಹ ಇತರೆ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಸಿ ಕಳ್ಳಸಾಗಾಣಿಕೆ ನಿಯಂತ್ರಣಕ್ಕೆ ಸೂಕ್ತ ಕ್ರಮವಹಿಸಲಾಗಿರುತ್ತದೆ
(ಇ)	ಈ ಬಗ್ಗೆ ಸೂಕ್ತ ಕ್ರಮ ಜರುಗಿಸಿ, ಇಲ್ಲಿ ಪ್ರಬಲವಾಗಿರುವ ಹೆಚ್ಚಿನ ವ್ಯಾಪ್ತಿಯುಳ್ಳ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಸರಿಯಾದ ರೀತಿಯಲ್ಲಿ ಸ್ಥಾಪಿಸಿ, ಯಾವಾಗಲೂ ಸುಸ್ಥಿತಿಯಲ್ಲಿಡಲು ಕ್ರಮ ಜರುಗಿಸಲಾಗುವುದೇ?	ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕೆಕ್ಕನಹಳ್ಳ ಅರಣ್ಯ ತನಿಖಾ ಠಾಣೆಯಲ್ಲಿ ಈಗಾಗಲೇ ಅಳವಡಿಸಿರುವ ಸಿ.ಸಿ.ಟಿ.ವಿ. ಕ್ಯಾಮರಾಗಳು ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವಶ್ಯಕತೆ ಕಂಡು ಬಂದಲ್ಲಿ, ಬದಲಿಸಿ ಇನ್ನು ಉತ್ತಮ ರೀತಿಯ ಪ್ರಬಲ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಅಪಜೀ 25 ಎಫ್‌ಡಿಪಿ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ ಮತ್ತು ನಾಗರೀಕ ಸರಬರಾಜು
ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು